

## ಅಗ್ರ ಮೂರರ ಒಳಗೆ ಸ್ಥಾನ



ಹಿಂದಿನ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ್ದ ಭಾರತ ಹಾಕಿ ತಂಡಕ್ಕೆ ಈ ಬಾರಿಯೂ ಪದಕ ಗೆಲ್ಲಲು ಉತ್ತಮ ಅವಕಾಶವಿದೆ. 2021ರ ಒಲಿಂಪಿಕ್ಸ್‌ನಲ್ಲಿದ್ದ ಬಹುತೇಕ ತಂಡವೇ ಈಗಲೂ ಇದೆ. ಲೀಗ್ ಹಂತದಲ್ಲಿ ಮೊದಲ ಎರಡು ಪಂದ್ಯಗಳು ಬಹಳಷ್ಟು ಮಹತ್ವ ಪಡೆದುಕೊಂಡಿವೆ. ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದರೆ ಭಾರತ ಕ್ವಾರ್ಟರ್ ಫೈನಲ್ ಪ್ರವೇಶಿಸುತ್ತದೆ. ಇದು ಮಹತ್ವದ ಘಟ್ಟವಾಗಿದ್ದು, ತಯಾರಿಯೂ ಚೆನ್ನಾಗಿ ನಡೆಯುತ್ತದೆ. ಈ ಬಾರಿಯೂ ಮೂರರ ಒಳಗೆ ಸ್ಥಾನ ಪಡೆಯುವ ಭರವಸೆಯಿದೆ.

ಒಲಿಂಪಿಕ್ಸ್‌ನಲ್ಲಿ ಭಾರತ ಎಂಟು ಬಾರಿ ಚಿನ್ನದ ಪದಕ ಗೆದ್ದ ಇತಿಹಾಸ ಹೊಂದಿದೆ. ಅಂಥದ್ದೇ ಸಾಧನೆ ಈಗಲೂ ಮರುಕಳಿಸಬೇಕು ಎನ್ನುವುದು ನನ್ನ ಆಸೆ. ಈ ಸಲದ ಹವಾಗುಣಕ್ಕೆ ಹೊಂದಿಕೊಳ್ಳಲು ಮೊದಲೇ ಪ್ಯಾರಿಸ್ ಹೋಗುತ್ತಿದ್ದಾರೆ.

ಒಲಿಂಪಿಕ್ಸ್ ತಂಡದಲ್ಲಿ ಕರ್ನಾಟಕದ ಮೊಹಮ್ಮದ್ ರಹೀಲ್ ಮೀಸಲು ಆಟಗಾರನಾಗಿ ತಂಡದಲ್ಲಿ ಅವಕಾಶ ಪಡೆದಿದ್ದಾರೆ. ರಾಜ್ಯದ ಇಬ್ಬರು ಆಟಗಾರರು ಜೂನಿಯರ್ ಹಂತದಲ್ಲಿ ಉತ್ತಮ ಪ್ರದರ್ಶನ ತೋರುತ್ತಿದ್ದು, ಮುಂಬರುವ ದಿನಗಳಲ್ಲಿ ಭಾರತ ಸೀನಿಯರ್ ತಂಡದಲ್ಲಿ ರಾಜ್ಯದ ಮತ್ತಷ್ಟು ಆಟಗಾರರು ಸ್ಥಾನ ಪಡೆಯುತ್ತಾರೆ.

ಭಾರತ ಹಾಕಿ ತಂಡದಲ್ಲಿ ಮೊದಲಿನಿಂದಲೂ ರಾಜ್ಯದ ಆಟಗಾರರು ಇದ್ದಾರೆ. ಪ್ರಸ್ತುತ ಜೂನಿಯರ್ ಹಂತದಲ್ಲಿ ಇರುವವರು ಮುಂದೆ ಹಿರಿಯರ ತಂಡದಲ್ಲಿ ಸ್ಥಾನ ಪಡೆಯುತ್ತಾರೆ. ನಾವೂ ಸಾಧ್ಯವಾದಷ್ಟು ಪ್ರಯತ್ನ ಮಾಡಿ ರಾಜ್ಯದ ಆಟಗಾರರು ದೇಶ ಪ್ರತಿನಿಧಿಸುವಂತೆ ಮಾಡುತ್ತೇವೆ.

ಭಾರತ ತಂಡ ಸ್ಥಾನ ಪಡೆದ ಬಿ ಗುಂಪಿನಲ್ಲಿರುವ ರಾಷ್ಟ್ರಗಳ ಎದುರು ಭಾರತ ಹಿಂದಿನ ಮೂರು ವರ್ಷಗಳಲ್ಲಿ ಪಂದ್ಯಗಳನ್ನಾಡಿದ್ದು, ಒಲಿಂಪಿಕ್ಸ್‌ನಲ್ಲಿಯೂ ಮೊದಲ ಮೂರರ ಒಳಗೆ ಸ್ಥಾನ ಪಡೆದುಕೊಳ್ಳಲಿದೆ ಎನ್ನುವ ವಿಶ್ವಾಸ ನನ್ನದು.

**-ವಿ.ಆರ್. ರಘುನಾಥ್,** ಭಾರತ ಹಾಕಿ ತಂಡದ ಮಾಜಿ ನಾಯಕ

2016ರ ಒಲಿಂಪಿಕ್ಸ್‌ನಲ್ಲಿ ಪದಕ ಪಡೆದ ಪಿ.ವಿ. ಸಿಂಧು, ಎದುರಾಳಿ ಕ್ಯಾರೊಲಿನಾ ಮರೀನ್ ಅವರನ್ನು ಸಂತೈಸಿದ ಸಂದರ್ಭ



ಸೂಚಿಸುತ್ತದೆ. ಐದು ವರ್ತುಲಗಳು ಐದು ಖಂಡಗಳ ಸಂಕೇತವೂ ಆಗಿವೆ. ‘ಇನ್ನಷ್ಟು ವೇಗ, ಇನ್ನಷ್ಟು ಎತ್ತರ ಹಾಗೂ ಇನ್ನಷ್ಟು ಬಲಗಳ ಸ್ಪರ್ಧೆ’ ಎನ್ನುವ ಸಾಲುಗಳು ಒಲಿಂಪಿಕ್ಸ್‌ನ ಸೂತ್ರ. ಕೀರ್ತಿ ಇರುವುದು ಪದಕ ಗೆಲ್ಲುವುದರಲ್ಲಿ ಅಲ್ಲ; ಪಾಲ್ಗೊಳ್ಳುವುದರಲ್ಲಿ ಎನ್ನುವುದು ಒಲಿಂಪಿಕ್ಸ್‌ನ ಮುಖ್ಯ ಧ್ಯೇಯ.

ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಒಲಿಂಪಿಕ್ಸ್ ಬಂತೆಂದರೆ ಜಗತ್ತಿನ ಸರ್ವ ಕ್ರೀಡಾಪ್ರೇಮಿಗಳಿಗೂ ಹಬ್ಬದ ಸಮಯ. ಈ ಬಾರಿ ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ಜುಲೈ 26ರಿಂದ ಆಗಸ್ಟ್ 11ರವರೆಗೆ ಕ್ರೀಡಾಕೂಟ ಆಯೋಜನೆಯಾಗಿದ್ದು, 32 ಕ್ರೀಡೆಗಳಲ್ಲಿ 10,500 ಕ್ರೀಡಾಪಟುಗಳು ಪಾಲ್ಗೊಳ್ಳುವರು.

ಒಲಿಂಪಿಕ್ಸ್ ಎನ್ನುವ ಭವ್ಯ ವೇದಿಕೆಯಲ್ಲಿ ಸಾವಿರಾರು ಕ್ರೀಡಾಪಟುಗಳು, ಕ್ರೀಡಾ ಸಿಬ್ಬಂದಿ, ಪತ್ರಕರ್ತರು, ರಾಯಭಾರಿಗಳು, ಹೀಗೆ ಅನೇಕರು ಸೇರುತ್ತಾರೆ. ಇದಕ್ಕೂ ಪೂರ್ವದಲ್ಲಿ ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ದೇಶಗಳಲ್ಲಿ ಕ್ರೀಡೆಯ ಹೆಸರಿನಲ್ಲಿ ದೇಶದ ಜನರನ್ನು ಒಂದುಗೂಡಿಸುವ, ದೇಶದ ಘನತೆ ಎತ್ತಿ ಹಿಡಿಯುವ ಕನಸು ಹೊತ್ತ ಕ್ರೀಡಾಪಟುಗಳಿಗೆ ಉತ್ತೇಜಿಸಲು ಆಶಯ ಗೀತೆ ಸಿದ್ಧಗೊಳ್ಳುತ್ತದೆ. ಅದು ದೇಶದಾದ್ಯಂತ ಅನುರಣಿಸುತ್ತದೆ.

### ಮೂರು ಸಾವಿರ ವರ್ಷಗಳ ಇತಿಹಾಸ

ಫ್ರಾನ್ಸ್‌ನ ಪಿಯರಿ ಡಿ. ಕೊಬರ್ತಿ ಎಂಬ ಕ್ರೀಡಾಪ್ರೇಮಿಯ ಪ್ರಯತ್ನದಿಂದಾಗಿ 1896ರಲ್ಲಿ ಅಥೆನ್ಸ್‌ನಲ್ಲಿ ಆಧುನಿಕ ಒಲಿಂಪಿಕ್ಸ್ ಆರಂಭವಾಯಿತು. ಮಹಾಯುದ್ಧಗಳ ಕಾರಣದಿಂದಾಗಿ 1916, 1940 ಮತ್ತು 1944 ಹೊರತುಪಡಿಸಿ ಇಲ್ಲಿಯವರೆಗೆ ನಿರಂತರವಾಗಿ ಒಲಿಂಪಿಕ್ಸ್ ಸ್ಪರ್ಧೆಗಳು ನಡೆದುಕೊಂಡು ಬಂದಿವೆ. ಪ್ರತಿ ಕೂಟದಲ್ಲಿಯೂ ಮಾನವೀಯ ಮೌಲ್ಯಗಳ ಸಂದೇಶ ಸಾರುವ ಕೆಲಸ ನಿರಂತರವಾಗಿದೆ.

ಮೂರು ಸಾವಿರ ವರ್ಷಗಳ ಹಿಂದೆ ನೈರುತ್ಯ ಗ್ರೀಸ್‌ನ ಒಲಿಂಪಿಯ ಬಯಲು ಪ್ರದೇಶ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿ ಗ್ರೀಕರ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ವಿಜೃಂಭಿಸುತ್ತಿದ್ದವು. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಜುಲೈನಲ್ಲಿ ಅಲ್ಲಿ ನಡೆಯುತ್ತಿದ್ದ ಕ್ರೀಡೆಗಳಿಗೆ ಒಲಿಂಪಿಕ್ಸ್ ಎನ್ನುವ ಹೆಸರು ಬಂತು. ಆದ್ದರಿಂದ ಆಧುನಿಕ ಒಲಿಂಪಿಕ್ಸ್ ಅನ್ನು ಪ್ರತಿ ಬಾರಿಯೂ ಜುಲೈನಲ್ಲಿಯೇ ಆಯೋಜಿಸಲಾಗುತ್ತದೆ.

ಈಗ ದೇಶಗಳ ನಡುವಿನ ಯುದ್ಧ, ಅಂತರ್ಯುದ್ಧದ ಸಂಕಷ್ಟದ ಸಮಯದಲ್ಲಿ ಕ್ರೀಡೆಯ ನೆಪದಲ್ಲಾದರೂ ದೇಶಗಳು ಒಗ್ಗೂಡುವ, ಬಾಂಧವ್ಯ ಬೆಸೆಯುವ ದಿನಗಳು ಬಂದಿವೆ.

### ಭರವಸೆಯ ಭಾರತ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ 111 ಕ್ರೀಡಾಪಟುಗಳು ದೇಶವನ್ನು ಪ್ರತಿನಿಧಿಸಲಿದ್ದು,